ಪಿ.ಡಬ್ಲ್ಯೂ- 1

**ದಿನಾಂಕ: 14-02-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಎಸ್ ಎನ್ ಆರ್ ವಕೀಲರಿಂದ**

ದಾವ ಷೆಡ್ಯೂಲ್ ಸ್ವತ್ತಿನ ವಿವರವನ್ನು ನ್ಯಾಯಲಯಕ್ಕೆ ತಿಳಿಸಿದ್ದೀರಾ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ನೀವು ಖಾಲಿ ಜಾಗದ ಬಗ್ಗೆ ದಾವವನ್ನು ಹೂಡಿದ್ದೀರಾ ಎಂದರೆ ಸಾಕ್ಷಿ ನಾನು ಅಲ್ಲಿ ತಾತ್ಕಲಿಕವಾಗಿ ಒಂದು ಶೆಡ್ ನ್ನು ನಿರ್ಮಾಣ ಮಾಡಿರುವ ಬಗ್ಗೆ ತಿಳಿಸಿರುತ್ತೇನೆಂದು ನುಡಿದಿರುತ್ತಾರೆ. ಸದರಿ ದಾವೆಯಲ್ಲಿ ಖಾಲಿ ನಿವೇಶನ ಎಂದು ನಮೂದಿಸಿಲ್ಲ ಎಂದರೆ ಸರಿ. ನೀವು ಹೇಳಿರುವಂತೆ ವಿಭಾಗವಾಗಿದೆ ಎಂಬುದಕ್ಕೆ ವಿಭಾಗ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ವಿಭಾಗ ಪತ್ರದಲ್ಲಿ ಸದರಿ ದಾವೆಯ ಆಸ್ತಿಯ ಬಗ್ಗೆ ವಿವರಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ನೀವು ದಾವಾದಲ್ಲಿ ಮಂಗಳೂರು ಟೈಲ್ಸ್ ಇರುವ ಮನೆಯ ಬಗ್ಗೆ ತಿಳಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ನೀವು ನಿಮ್ಮ ದಾವೆಯಲ್ಲಿ ಮಂಗಳೂರು ಟೈಲ್ಸ್ ಮನೆ ಮತ್ತು ಖಾಲಿ ಜಾಗ ಎಂದು ನಮೂದು ಮಾಡಿದ್ದೀರಾ ಎಂದರೆ ಸರಿ. ನೀವು ದಾವ ಶೆಡ್ಯೂಲ್ ನಲ್ಲಿ ವಿವರಣೆಯಲ್ಲಿ ಮಂಗಳೂರು ಟೈಲ್ಸ್ ಹೌಸ್ ಎಂದು ನಮೂದು ಮಾಡಿಲ್ಲ ಎಂದರೆ ಸರಿ. ನೀವು ನಿಮ್ಮ ದಾವೆಯಲ್ಲಿ ಮಂಗಳೂರು ಟೈಲ್ಸ್ ಹೌಸ್ ಎಷ್ಟು ವಿಸ್ತರಣೆಯಲಿದೆ, ಖಾಲಿ ನಿವೇಶನ ಎಷ್ಟು ವಿಸ್ತರಣೆಯಲಿದೆ ಮತ್ತು ಟೆಂಪೂರರಿ ಹೌಸ್ ಎಷ್ಟು ವಿಸ್ತರಣೆಯಲ್ಲಿ ಇದೆ ಎಂದು ತಿಳಿಸಿದ್ದೀರಾ ಎಂದರೆ ಸಾಕ್ಷಿ ತಿಳಿಸಿಲ್ಲ ಎಂದು ನುಡಿದಿರುತ್ತಾರೆ, ನೀವು ನಿಮ್ಮ ದಾವೆಯಲ್ಲಿ ಮಂಗುಳಾರು ಟೈಲ್ಸ್ ಹೌಸ್ ಎಷ್ಟು ವಿಸ್ತರಣೆಯಲ್ಲಿ ಇದೆ ಎಂದು ನಮೂದು ಮಾಡಿಲ್ಲ ಎಂದರೆ ಸರಿ. ಸಾಕ್ಷಿಯು ಸದರಿಯವರು ಅಳತೆ ಮಾಡಲು ಬಿಟ್ಟಿರುವುದಿಲ್ಲ ಎಂದು ನುಡಿದಿರುತ್ತಾರೆ.

297 ರಲ್ಲಿ ನಿಮ್ಮ ಪ್ರತಿವಾದಿಗಳ ಸ್ವತ್ತು ಇದೆ ಎಂದರೆ ಸಾಕ್ಷಿ ಅವರ ಸ್ವತ್ತು 297/ಎ ರಲ್ಲಿ ಇರುತ್ತದೆ ಎಂದು ನುಡಿದಿರುತ್ತಾರೆ. ಮೂಲತಃ ದಾವ ಸ್ವತ್ತು 297 ರದ್ದಾಗಿರುತ್ತದೆ ಎಂದರೆ ಸರಿ. 297

ಅಸಸ್ ಮೆಂಟ್ ನಲ್ಲಿ ಪೂರ್ವ ಪಶ್ಚಿಮ 96 ಅಡಿ, ಉತ್ತರ ದಕ್ಷಿಣ -26 ಅಡಿ ಇದೆ ಎಂದರೆ ಸರಿ. 297 ಅಸಸ್ ಮೆಂಟ್ ನಂಬರಿನ ಸ್ವತ್ತಿನ ಪೂರ್ವ ಭಾಗಕ್ಕೆ ರಸ್ತೆ ಇದೆ ಎಂದರೆ ಸರಿ. ಪಶ್ಚಿಮಕ್ಕೆ ಜಮೀನು ಇದೆ ಎಂದರೆ ಸರಿ. ಉತ್ತರಕ್ಕೆ ಕೃಷ್ಣನಾಯ್ಕರವರ ಜಮೀನು ಇದೆ ಎಂದರೆ ಸಾಕ್ಷಿಯು ಭೀಮನಾಯ್ಕ ಮತ್ತು ಕೆ.ಕುಮಾರ್ ರವರ ಮನೆ ಇರುತ್ತದೆ ಎಂದು ನುಡಿದಿರುತ್ತಾರೆ, ದಕ್ಷಿಣಕ್ಕೆ ರಾಮನಾಯ್ಕರವರ ಮನೆ ಇದೆ ಎಂದರೆ ಸರಿ. ಈ ಮೇಲೆ ತಿಳಿಸಿದಂತಹ ಚಕ್ಕುಬಂದಿಯು ಎಂ ಆರ್ 48/2021 ರಲ್ಲಿ ಸಹ ಇದೆ ಎಂದರೆ ಸರಿ. 297 ರ ಆಸ್ತಿಯು ರಾಮನಾಯ್ಕರವರ ಸ್ವಾಧೀನದಲ್ಲಿತ್ತು ಎಂದರೆ ಸರಿ. ನೀವು ನ್ಯಾಯಾಲಯಕ್ಕೆ ಸಲ್ಲಿರುವ ಒಪ್ಪಿಗೆ ಪತ್ರದಲ್ಲಿ ಕೃಷ್ಣನಾಯ್ಕರವರ ಸಹಿ ಇಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ಅವರು ಆ ಕಾಲಕ್ಕೆ ತೀರಿಹೋಗಿದ್ದರು ಎಂದು ನುಡಿದಿರುತ್ತಾರೆ. ಸದರಿ ಒಪ್ಪಿಗೆ ಪತ್ರದಲ್ಲಿ ನಿಪಿ-8 ರಲ್ಲಿ ಭೀಮನಾಯ್ಕರವರ ಸಹಿ ಇದೆಯೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ಒಪ್ಪಿಗೆ ಪತ್ರದಲ್ಲಿ ಸ್ವತ್ತಿನ ವಿವರ ಅಸಸ್ ಮೆಂಟ್ ನಂ.297 ರ ವಿಸ್ತೀರ್ಣ 97 ಇಂಟು 26 ಇದೆ ಎಂದರೆ ಸರಿ. ಒಪ್ಪಿಗೆ ಪತ್ರದಲ್ಲಿ ನೀಡಿರುವ ಸ್ವತ್ತಿನ ವಿವರದ ಅಸಸ್ ಮೆಂಟ್ ನಂಬರ್ ಇದೆಯೇ ಎಂದರೆ ಸಾಕ್ಷಿ ಇದೆ ಎಂದು ನುಡಿದಿರುತ್ತಾರೆ. ಒಪ್ಪಿಗೆ ಪತ್ರದಲ್ಲಿ ನೀವು ದಾವ ಸ್ವತ್ತಿನಲ್ಲಿ ನೀಡಿರುವ ಚಕ್ಕುಬಂದಿಯನ್ನು ನಮೂದು ಮಾಡಿಲ್ಲ ಎಂದರೆ ಸರಿ. ನೀವು ದಾವ ಸ್ವತ್ತಿನಲ್ಲಿ ನೀಡಿರುವ ವಿಸ್ತರಣೆಯ ಬಗ್ಗೆ ಯಾವುದಾದರೂ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ನಿಮ್ಮ ಮತ್ತು ರಾಮನಾಯ್ಕರವರ ನಡುವೆ ಯಾವುದೇ ಒಪ್ಪಿಗೆ ಪತ್ರ ಆಗಿರುವುದಿಲ್ಲ ಎಂದರೆ ಸಾಕ್ಷಿಯು ಆಗಿರುತ್ತದೆ ಎಂದು ನುಡಿದಿರುತ್ತಾರೆ. ನೀವು ರಾಮನಾಯ್ಕರವರ ಸಹಿಯನ್ನು ಪೋರ್ಜರಿ ಮಾಡಿರುತ್ತೀರಾ ಎಂದರೆ ಸರಿಯಲ್ಲ. ನೀವು ದಾವ ಸ್ವತ್ತಿನಲ್ಲಿ ತಿಳಿಸಿರುವಂತೆ 92 ಇಂಟು 10 ವಿಸ್ತೀರ್ಣದ ಬಗ್ಗೆ ಒಪ್ಪಿಗೆ ಪತ್ರದಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ನೀವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

Sd/-

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**